# ಮುಖ್ಯಪ್ರಾಣ ಎನ್ನ ಮೂಲ ಗುರುವೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
4. **Note:** Lyrics in all the above references are same except one word as in Ref. 1, which is given in grey highlights.
5. **Note:** Singer has followed these lyrics.

ರಾಗ: ಕಾಂಭೋಜಿ ತಾಳ: ಝಂಪೆ

ಮುಖ್ಯಪ್ರಾಣ ಎನ್ನ ಮೂಲ ಗುರುವೆ || ಪ ||
ರಕ್ಕಸಾಂತಕ ಶ್ರೀ ರಾಮನ ನಿಜದಾಸ || ಅಪ ||

ತಂದೆ ನೀನೆ ಎನಗೆ ತಾಯಿ ನೀನೇ ಎನಗೆ
ಬಂಧು ನೀನೇ ಎನಗೆ ಬಳಗ ನೀನೇ
ಎಂದೆಂದಿಗು ನಮ್ಮೆಲರ ರಕ್ಷಿಪನು ನೀನೇ || 1 ||

ತಾತ ನೀನೇ ಎನಗೆ ಕರ್ತ ನೀನೇ ಎನಗೆ
ವಿತ್ತ ನೀನೇ ಎನಗೆ ವಿಭವ ನೀನೇ
ಸತ್ಯ ನೀನೇ ಎನಗೆ ಸದಾಚಾರವು ನೀನೇ || 2 ||

ಸುಖವು ನೀನೇ ಎನಗೆ ಸುಲಭ ನೀನೇ ಎನಗೆ
ಶ್ರೀಕಾಂತ ಶ್ರೀ ಪುರಂದರ ವಿಠಲನ
ಏಕಾಂತ ಭಕುತ (ನಿಜವು) (ನಿಜ ದಾಸ) ನೀನೇ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಶ್ರೀ ವಾಯುದೇವರ ಸ್ತೋತ್ರ ಮತ್ತು ಮಹಾತ್ಮ್ಯ ವರ್ಣನೆಗಳು ಈ ಕೀರ್ತನೆಯಿಂದ ಮೊದಲಾಗುವವು. ಹನುಮ-ಭೀಮ-ಮಧ್ವ ಇವು ವಾಯುದೇವರ ಮೂರು ಅವತಾರಗಳು. ಈ ಅವತಾರದ ಕ್ರಮದಲ್ಲಿಯೇ ಇಲ್ಲಿನ ಕೀರ್ತನೆಗಳನ್ನು ಸಂಕಲಿಸಲಾಗಿದೆ.

**ಮೂಲಗುರು –** ತಮ್ಮ ದೀಕ್ಷಾ ಗುರುಗಳಾದ ವ್ಯಾಸರಾಯ ಸ್ವಾಮಿಗಳ ಗುರು ಪರಂಪರೆಗೆ ಮೂಲರಾದವರು, ಮಧ್ವಾಚಾರ್ಯರು.

**ರಕ್ಕಸಾಂತಕ –** ರಾವಣನನ್ನು ಸಂಹರಿಸಿದ.

**ತಂದೆ ನೀನೆ…** – 'ಗುರುರ್ಮಾತಾ ಗುರುಃ ಪಿತಾ ಗುರುರೇವ ಸ್ವಬಾಂಧವಾಃ' ಎನ್ನುವುದರ ಛಾಯೆ.

**ಕರ್ತ** – ನನ್ನಿಂದ ಕೆಲಸ ಮಾಡಿಸುವ ಪ್ರೇರಕ' ನನ್ನೊಳಗಿದ್ದು ಕೆಲಸವನ್ನು ಮಾಡಿಸುವ ತತ್ತ್ವಾಭಿಮಾನಿ.

**ವಿತ್ತ** – ಹಣ, ಸಂಪತ್ತು.

**ಏಕಾಂತ ಶ್ರೀ ಪುರಂದರ ವಿಠಲನ ಭಕುತ** – ಶ್ರೀ ಪುರಂದರ ವಿಠಲನ ಏಕಾಂತ ಭಕ್ತ ಎಂದು ಅನ್ವಯ. ಮೊದಲ ಎರಡು ಕಕ್ಷೆಗಳಲ್ಲಿ ನಿತ್ಯರಾದ, ಮುಕ್ತರಾದ ಲಕ್ಷ್ಮೀ ನಾರಾಯಣರಿದ್ದು, ಮೂರನೆಯ ಕಕ್ಷೆಯಲ್ಲೇ ವಾಯುವು ಜೀವೋತ್ತಮನಾಗಿ ಇರುವುದರಿಂದ ಅವರೊಂದಿಗೆ ನೇರವಾದ ನೆಂಟುಳ್ಳವನು, ಉಳಿದೆಲ್ಲ ದೇವತೆಗಳೂ ಜೀವರೂ ವಾಯುವಿನ ಮೂಲಕವೇ ವಿಷ್ಣು ಪ್ರಸಾದವನ್ನು ಗಳಿಸಿಕೊಳ್ಳುವರು.

**Classification:** Keerthane
**Ankita:** sri purandara vittala
**Location:** NA
**Category:** Hanuma Stuti
**Sub-Category:** hanuma, rama, tande, tayi, bandhu, satya, madhva, madhwacharya, hanuma-bhima-madhva,
**Pravachana:** NA
**Explanation:** NA